4. ವಿಷಯ : ಸೈಬರ್ ಕ್ರೈಮ್ ಪತ್ತೆ ಹಚ್ಚುವುದಕ್ಕೆ ಸಾಫ್ಟ್‌ವೇರ್ ಇಂಜಿನಿಯರ್‌ಗಳನ್ನು **hire** ಮಾಡಿ ತೆಗೆದುಕೊಳ್ಳುವ ಬಗ್ಗೆ.

ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೆ, ಭಯೋತ್ಪಾದನೆ ಸಂಘಟನೆ ಕುರಿತ ಟ್ವೀಟರ್ ಖಾತೆ ನಿರ್ವಹಣೆ ಮಾಡುತ್ತಿದ್ದು ಆರೋಪದ ಮೇಲೆ ಮೆಹಿಂಮಸ್ಸೂರ್ ಬಿಸ್ವಾಸ್ ಅನ್ನು ಇತ್ತೀಚೆಗೆ ಬಂದಿಸಿದ್ದೀರಿ. ನನಗೆ ಇರುವ ಆತಂಕ ಏನೆಂದರೆ ಸೈಬರ್ ಕ್ರೈಮ್ ಅನ್ನು ನಿರ್ವಹಣೆ ಮಾಡುವುದಕ್ಕೆ ಬೇಕಾದಂತಹ ಸಿಸ್ಟಂ ಮೆಕಾನಿಸಂ ಟ್ರೈನಿಂಗ್ ಅನ್ನು ನಮ್ಮ ಪಿ.ಸಿ. ಗಳಿಗೆ ಮೈಕ್ರೋಸಾಫ್ಟ್ ರವರ ಹತ್ತಿರ ಮೂರು ದಿನ ಟ್ರೈನಿಂಗ್ ಕೊಡಿಸಿದರೆ ಸಾಕಾಗುವುದಿಲ್ಲ. Software Engineers ಅನ್ನು hire ಮಾಡಿ ಸೈಬರ್ ಕ್ರೈಮ್ ಪತ್ತೆ ಹಚ್ಚುವ ಕೆಲಸಕ್ಕೆ ಇಟ್ಟುಕೊಳ್ಳಬೇಕಾಗುತ್ತದೆ. ತಾಂತ್ರಿಕತೆಯನ್ನು ಉಪಯೋಗಿಸಿಕೊಂಡು ದೊಡ್ಡ ಕ್ರೈಮ್ ಆಗಿ ಬೆಳೆಯುತ್ತಿದೆ. ಅದಕ್ಕೆ ಸಂಬಂಧಿಸಿದಂತೆ ಈ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸುವುದಕ್ಕೆ ಬಯಸುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ಅದಕ್ಕೆ reply ಬಂದಿಲ್ಲ, ನಾಳೆ ಉತ್ತರ ಕೊಡಿಸುತ್ತೇನೆ.

4. ವಿಷಯ : ಭದ್ರಾವತಿಯಲ್ಲಿರುವ ನಿಂತುಹೋಗಿರುವ ಎಂ.ಪಿ.ಎಂ. ಮತ್ತು ಕಬ್ಬು ಕಾರ್ಖಾನೆಯನ್ನು ಪುನರಾರಂಭಿಸುವ ಬಗ್ಗೆ.

ಶ್ರೀ ಬಿ.ವೈ. ರಾಘವೇಂದ್ರ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೆ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಲಿಯಿಂದ ನಮ್ಮ ಭದ್ರಾವತಿ ಎಂ.ಪಿ.ಎಂ. ಕಾರ್ಖಾನೆಗೆ ಈಗಾಗಲೇ ಅನಿರ್ದಿಷ್ಟ ಅವಧಿಗೆ ಮುಚ್ಚಬೇಕೆಂದು ಆದೇಶವಾಗಿದೆ. ಅಲ್ಲಿಗೆ ನಿನ್ನೆಯಿಂದ ಪವರ್ ಕಟ್ ಮಾಡಲಾಗಿದೆ. ಈಗ ಎಂ.ಪಿ.ಎಂ. ಕಾರ್ಖಾನೆ ಮೂರ್ತಿ ನಿಂತು ಹೋಗಿದೆ. ಆ ಕಾರ್ಖಾನೆ ಎರಡು ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆಯುವ ಕೆಪಾಸಿಟಿ ಇದ್ದು, ಅಲ್ಲಿ ಕಾರ್ಖಾನೆ ಮುಚ್ಚಿ ಹೋಗುತ್ತಿದೆ, ಕಬ್ಬನ್ನು ಅರೆಯುವುದಿಲ್ಲವೆಂದು ಹೇಳಿ ನಿನ್ನೆಯಿಂದ ರೈತರನ್ನು ವಾಪಸ್ಸು ಕಳುಹಿಸುವಂತಹ ಕೆಲಸ ಆಗುತ್ತಿದೆ. ದಯಮಾಡಿ ಗೌರವಾನ್ವಿತ ಮುಖ್ಯಮಂತ್ರಿಯವರು ಪೇಪರ್ ಫ್ಯಾಕ್ಟರಿ ಸದ್ಯಕ್ಕೆ ಪೆಂಡಿಂಗ್ ಇಟ್ಟರೂ ಪರವಾಗಿಲ್ಲ, ಈ ಶುಗರ್ ಕಾರ್ಖಾನೆಯನ್ನು ಶುರು ಮಾಡಿ ರೈತರ ಕಬ್ಬು ಅರೆಯುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಅದು ಅರಣ್ಯ ಸಚಿವರಿಗೆ ಬರುತ್ತದೆ.

ಅಧ್ಯಕ್ಷರು : ಅಲ್ಲ, ಕೈಗಾರಿಕೆ ಸಚಿವರಿಗೆ ಬರುತ್ತದೆ.

ಶ್ರೀ ಬಿ.ವೈ. ರಾಘವೇಂದ್ರ : ಮಾನ್ಯ ಮುಖ್ಯಮಂತ್ರಿಗಳಿಗೆ ಬರುತ್ತದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಕೈಗಾರಿಕೆ ಸಚಿವರಿಂದ ನಾಳೆ ಉತ್ತರವನ್ನು ಕೊಡಿಸುತ್ತೇನೆ.